# ದೇವರ ಕಣಿವೆ

'ದೇವರು ಮೊದಲು ಸೃಷ್ಟಿಸಿದ್ದು ಪ್ರಕೃತಿಯನ್ನು' ಎಂದು ಹೇಳಿದ್ದಾನೆ ಫ್ರಾನ್ಸಿಸ್ ಬೇಕನ್. ವಾಯುಮಂಡಲದ ಗಾಳಿ ಸುಗಂಧಭರಿತವಾಗಿರಿಸುವ ಪ್ರಕೃತಿಯು ಭೂಮಿಯ ಮೇಲಿನ ಶಾಶ್ವತ ಸ್ವರ್ಗ. ದೇವರ ಕಣಿವೆಯಂಥ ಸ್ವರ್ಗವನ್ನು, ಸ್ವರ್ಗವನ್ನಾಗಿಯೇ ಇಟ್ಟುಕೊಳ್ಳುವಲ್ಲಿ ನಮ್ಮೆಲ್ಲರ ಪಾತ್ರ ಮುಖ್ಯವಾದದ್ದು. 'ಪರಿಸರವೆಂಬುದು ಸೂಕ್ಷ್ಮಜೀವಿಗಳಿಂದ ಮೊದಲಾಗಿ ಮನುಷ್ಯನವರೆಗೆ ಪರಸ್ಪರ ಹೆಣೆದುಕೊಂಡಿರುವ ಜಟಿಲವಾದ ಜೀವಜಾಲ. ಈ ಜೀವಜಾಲದ ಅಂತರ್‌ಸಂಬಂಧವು ಮನುಷ್ಯನಿಂದ ಸಭ್ಯ ಮನೋವೃತ್ತಿಯನ್ನು ಅಪೇಕ್ಷಿಸುತ್ತದೆ' (ರಾಗು). ಈ ಸಭ್ಯತೆಯನ್ನು ನಿರ್ಲಕ್ಷಿಸಿ, ಸ್ವಾರ್ಥಕ್ಕೆ ಒಳಗಾಗಿ ಪ್ರಕೃತಿಯ ಮಡಿಲಿಗೆ ಕೈ ಹಾಕುತ್ತೇವೆಯೊ, ಇದೇ ಸ್ವರ್ಗ ನಮ್ಮೆಲ್ಲರ ಪಾಲಿನ ನರಕವೂ ಆಗುತ್ತದೆ. ಆದ್ದರಿಂದಲೇ ಪ್ರಕೃತಿಯೆನ್ನುವುದು ಮಾನವ ತನ್ನನ್ನು ತಾನು ನೋಡಿಕೊಳ್ಳಲು ಸೃಷ್ಟಿಯಾದ ಕನ್ನಡಿ ಎಂದು ಹೇಳುತ್ತಾರೆ. ಒಮ್ಮೆ ಶಿವರಾಮ ಕಾರಂತರನ್ನು ಯಾರೋ ಒಬ್ಬರು 'ಪ್ರಕೃತಿಯನ್ನು ಉಳಿಸಲು ನಾವೇನು ಮಾಡಬೇಕು?' ಎಂದು ಕೇಳಿದರಂತೆ. ಅದಕ್ಕೆ ಕಾರಂತರು 'ಏನೂ ಮಾಡದೇ ಸುಮ್ಮನಿರುವುದಷ್ಟೆ ನಾವು ಮಾಡಬಹುದಾದ ಒಳ್ಳೆಯ ಕೆಲಸ' ಎಂದರಂತೆ!

ನಿಸರ್ಗ ಎನ್ನುವುದು ಸೃಷ್ಟಿಕ್ರಿಯೆ ರೂಪಿಸಿದ ಮಂಗಳಕರವಾದ ಪರಿಪೂರ್ಣತೆಯ ಪ್ರತಿಮೆ. ನಮ್ಮಿಂದ ಏನನ್ನೂ ನಿರೀಕ್ಷಿಸದ ನಿಸರ್ಗವು ತನ್ನಲ್ಲಿರುವುದನ್ನೆಲ್ಲಾ ಜಗತ್ತಿನ ಜೀವಜಾಲಕ್ಕೆ ಮುಫತ್ತಾಗಿ ಕೊಡುತ್ತಲೇ ಬರುತ್ತಿದೆ. ಆದರೂ ಮನುಷ್ಯ ದುರಾಸೆಯಿಂದ ಪ್ರಕೃತಿಯನ್ನು ಇಡಿಯಾಗಿ ಒಮ್ಮೆಲೆ ದೋಚಲು ಅದರ ಒಡಲನ್ನೇ ಬಗೆಯುತ್ತಿದ್ದಾನೆ! ನಾವು ಪ್ರಕೃತಿಗೆ ಹೇಗೆ ಕೃತಜ್ಞರಾಗಿರುತ್ತೇವೆಯೊ; ಹಾಗೆಯೇ ಒಂದು ಬುಡ್ಡಿದೀಪ, ಒಂದು ಸಣ್ಣ ನಕ್ಷತ್ರದಿಂದ ಬರುವ ಬೆಳಕಿಗೂ ನಾವು ಕೃತಜ್ಞರಾಗಿರಬೇಕು. 'ವಾದ್ಯವೊಂದನ್ನು ಅದರ ಸ್ವರೂಪ, ಧ್ವನಿಗೆ ತಕ್ಕಂತೆ ಬಳಸಿಕೊಳ್ಳುವವನೇ ನಿಜವಾದ ಕಲಾವಿದ' ಎನ್ನುತ್ತದೆ ಮೀಮಾಂಸೆಯೊಂದು. ಈ ಮೋಹಕ ರೂಪಕವನ್ನು ಸೂಕ್ಷ್ಮವಾಗಿ ಒಳಹೊಕ್ಕು ನೋಡಿದರೆ, ಪ್ರಕೃತಿಯನ್ನು ಮನುಷ್ಯ ಹೇಗೆ ಸೃಜನಾತ್ಮಕವಾಗಿ ಬಳಸಿಕೊಳ್ಳಬಹುದು ಎನ್ನುವ ಅರಿವು ಗೋಚರವಾಗುತ್ತದೆ. ಪ್ರಕೃತಿಯೆನ್ನುವುದು ಸಕಲ ಜೀವಿಗಳನ್ನು ನೋಡಲು ಕರುಣೆಯ ಕಣ್ಣನ್ನು ನೀಡುವ ಚೈತನ್ಯದಾಯಕ ದೇವತೆಯಂತೆ.

ಗುಡ್ಡಗಾಡು ಜನರ ನಡುವಿನ ಜನಪದ ಕತೆಯೊಂದು ಹೀಗಿದೆ: ಆಗ ಭೂಮಿಯ ತುಂಬ ಬರೀ ಗಿಡಮರಗಳು, ದಟ್ಟವಾದ ಕಾಡು–ಕಣಿವೆ, ಪರ್ವತ, ಕಡಲು, ಹೊಳೆ, ಕೆರೆ ಇವುಗಳು ಮಾತ್ರ ತುಂಬಿ ತುಳುಕಾಡುತ್ತಿದ್ದವು. ಇದನ್ನು ಹೊರತುಪಡಿಸಿದರೆ ಇನ್ನಾವ ಜೀವಿಯೂ ಭೂಮಂಡಲದಲ್ಲಿ ಇರಲಿಲ್ಲ. ಇದೆಲ್ಲವೂ ಬಹುಕಾಲದವರೆಗೆ ಇತ್ತು. ಇದರಿಂದಾಗಿ ಈ ಕಾಡಿನ ಗಿಡ–ಮರ, ಹೊಳೆ, ಗುಡ್ಡ, ಕಡಲು–ಹೊಳೆ ಇವುಗಳಿಗೆ ಒಂದು ರೀತಿಯ ಏಕತಾನತೆ ಉಂಟಾಯಿತು. ಎಷ್ಟು ದಿನ ಇದೇ ಸೊಬಗನ್ನು ನೋಡುತ್ತಿರುವುದು ಎಂದು ಅವೆಲ್ಲ ಮಾತಾಡಿಕೊಂಡವು. ಕೊನೆಗೊಂದು ದಿನ ಬದಲಾವಣೆಗಾಗಿ ಒಂದು ನಿರ್ಧಾರಕ್ಕೆ ಬಂದವು. ದೇವರ ಬಳಿ ಹೋಗಿ, ಈ ಜಗತ್ತಿನಲ್ಲಿ ಪ್ರಾಣಿ–ಪಕ್ಷಿಗಳನ್ನು ಸೃಷ್ಟಿಸು. ಅವುಗಳೊಡನೆ ನಾವು ಸೊಗಸಾಗಿ ಬಾಳುತ್ತೇವೆ ಎಂದು ದೇವರ ಬಳಿ ಕೇಳಿಕೊಂಡವು. ಆಗ ದೇವರು ನಿಮ್ಮಿಷ್ಟದಂತಾಗಲಿ ಎಂದು ಅವರು ಹೇಳಿದ ಪ್ರಾಣಿ–ಪಕ್ಷಿಗಳನ್ನು ಸೃಷ್ಟಿಸಿದ. ಇದರಿಂದ ಅವೆಲ್ಲವೂ ಸಂತೋಷಗೊಂಡು ತಮ್ಮಿಚ್ಛೆಗೆ ತಕ್ಕಂತೆ ಯಾವ ಸಂಘರ್ಷವೂ ಇಲ್ಲದಂತೆ ಬದುಕತೊಡಗಿದವು. ಹೀಗೆ ಹಲವು ವರ್ಷ ಕಳೆದವು. ಈ ಬದುಕೂ ಅವುಗಳಿಗೆ ನೀರಸವಾಗಿ ಕಾಣತೊಡಗಿತು. ಈಗ ಅವೆಲ್ಲವೂ ಕೂಡಿಕೊಂಡು ಮತ್ತೊಮ್ಮೆ ದೇವರ ಬಳಿಗೆ ಹೋಗಿ, ನಮಗೆ ಏಕೋ ಈ ಜೀವನದಲ್ಲೂ ಸೊಗಸು ಕಾಣುತ್ತಿಲ್ಲ! ಆದ್ದರಿಂದ ನಮ್ಮೊಡನೆ ಬಾಳಿಕೊಂಡಿರಲು ಮನುಷ್ಯನನ್ನು ಸೃಷ್ಟಿಸು, ಎಂದು ಕೇಳಿಕೊಂಡವು. ಈಗ ದೇವರು ಮೊದಲಿನಂತೆ ಅವರು ಕೇಳಿದ್ದನ್ನು ಕೊಡದೆ, ಸ್ವಲ್ಪ ಯೋಚಿಸಿ ಹೇಳಿ, ಮನುಷ್ಯ ನೀವು ತಿಳಿದಂತೆ ಕೂಡಿ ಬಾಳುವವನಲ್ಲ! ನಿಮ್ಮ ಹಾಗೆ ನಿಸ್ವಾರ್ಥಿಯೂ ಅಲ್ಲ! ಎಲ್ಲವೂ ತನ್ನೊಬ್ಬನ ಉಪಯೋಗಕ್ಕಾಗಿ ಮಾತ್ರ ಇರುವುದು ಎಂದು ತಿಳಿದು ನೀವು ಬದುಕುತ್ತಿರುವ ಕಾಡಿನ ಸಂಪತ್ತನ್ನು ದೋಚಲು ಮುಂದಾಗುತ್ತಾನೆ! ಇದರಿಂದ ನಾಳೆ ನೀವೆಲ್ಲ ಅವನೊಡನೆ ಬಾಳುವುದೇ ದುಸ್ತರವಾಗುತ್ತದೆ, ನೀವೆಲ್ಲ ಸಮಾಧಾನವಾಗಿ ಕುಳಿತು ಯೋಚಿಸಿ ಹೇಳಿ ಎಂದ. ಅದಕ್ಕೆ ಅವೆಲ್ಲವೂ ಹಿಂದುಮುಂದು ನೋಡದೆ ಒಕ್ಕೊರಲಿನಿಂದ, ಇಲ್ಲ ಹಾಗೆಲ್ಲ ಮನುಷ್ಯ ಸ್ವಾರ್ಥಿಯಾಗಿ ಇರಲಾರ. ಅವನನ್ನು ನಮ್ಮ ಜೊತೆಯಲ್ಲಿಟ್ಟುಕೊಂಡೇ ಬಾಳಿಸುತ್ತೇವೆ. ಎಂದು ಹೇಳಿದವು. ಕೊನೆಗೆ ದೇವರು ಯತ್ನವಿಲ್ಲದೆ, ಮನುಷ್ಯನನ್ನು ಸೃಷ್ಟಿಸಿ ಅವರ ನಡುವೆ ಕಳುಹಿಸಿದ.

ಹೀಗೇ ಹಲವಾರು ವರ್ಷ ಕಳೆದವು. ಅಷ್ಟರಲ್ಲಿ ಮನುಷ್ಯ ಎಲ್ಲರಿಗಿಂತ ಹೆಚ್ಚು ಸ್ವಾರ್ಥಿಯಾಗಿದ್ದ. ಕಾಡು, ಬೆಟ್ಟ–ಗುಡ್ಡ, ಹೊಳೆ, ಮಣ್ಣು ಎಲ್ಲವನ್ನೂ ತನಗಾಗಿ ಉಪಯೋಗಿಸಿಕೊಳ್ಳತೊಡಗಿದ. ಇವನಿಂದಾಗಿ ಅನೇಕ ಜೀವಿಗಳು ಕಾಡಿನಲ್ಲಿ ಹೇಳಹೆಸರಿಲ್ಲದಂತಾದವು! ಕಾಡು ಬರಿದಾಗತೊಡಗಿತು. ಇವನ ಹಸ್ತಕ್ಷೇಪದಿಂದಾಗಿ ಇಡೀ ಭೂಮಂಡಲ ನಿಧಾನವಾಗಿ ನರಕವಾಗತೊಡಗಿತು. ಈಗ ಕಾಡಿನ ಜೀವಿಗಳಿಗೆ ತಾವು ಮಾಡಿದ ತಪ್ಪಿನ ಅರಿವಾಗತೊಡಗಿತು. ಅವು ಮತ್ತೆ ದೇವರ ಬಳಿ ಹೋಗಿ, ಮನುಷ್ಯನನ್ನು ವಾಪಸ್ಸು ಕರೆಸಿಕೋ ಎಂದು ಕೇಳಿಕೊಂಡವು. ಆಗ ದೇವರು, ಮನುಷ್ಯ ಮಾಡುವ ಹೀನ ಕಾರ್ಯಗಳನ್ನು ಕುರಿತು ಮೊದಲೇ ನಿಮಗೆ ಸುಳಿವು ನೀಡಿದ್ದೆ. ಈಗ ನಾನು ಏನೂ ಮಾಡಲಾಗುವುದಿಲ್ಲ! ಎಂದು ಹೇಳಿ ಅವರನ್ನು ಮರಳಿ ಕಳುಹಿಸಿದ.

ಪ್ರಕೃತಿಯಲ್ಲಿ ನಡೆಯುವ ಬಹುಪಾಲು ಅವಘಡಗಳಿಗೆ ಮಾನವನ ಹಸ್ತಕ್ಷೇಪವೇ ಕಾರಣ ಎಂದು ಪರಿಸರ ವಿಜ್ಞಾನಿಗಳು ಹೇಳುತ್ತಿದ್ದಾರೆ. ದೇವರ ಕಣಿವೆಯಲ್ಲಿ ಈಚೆಗೆ ನಡೆದ ಹೃದಯ ವಿದ್ರಾವಕ ಘಟನೆಗಳೆಲ್ಲಾ ಮಾನವನನ್ನೇ ಅಪರಾಧಿಯನ್ನಾಗಿಸಿ, ಪರಿಸರ ನ್ಯಾಯದ ಕಟಕಟೆಯಲ್ಲಿ ನಿಲ್ಲಿಸಿವೆ. ಪ್ರಕೃತಿ ನಮಗೆ ಮರಳಿಸಿದ ದುರ್ಘಟನೆಗಳನ್ನು ನಾವು ನೋಡಿದ್ದೇವೆ. ಅನುಭವದ ಮಾತೊಂದು ಹೇಳುತ್ತದೆ: 'ದೇವರು ಸ್ವರ್ಗವನ್ನು ಸೃಷ್ಟಿಸಿದರೆ, ಮನುಷ್ಯ ನರಕವನ್ನು ಸೃಷ್ಟಿಸಿದ'.

ನಮಗೆ ಕೈಗಾರಿಕೆ, ಅಭಿವೃದ್ಧಿ ಬೇಡವೆಂದು ಹೇಳಲಾಗುವುದಿಲ್ಲ. ಆದರೆ ಅವೆಲ್ಲವೂ ನಮ್ಮ ನಮ್ಮ ಭೌಗೋಳಿಕ ಪ್ರದೇಶಗಳ ಸಾಂಸ್ಕೃತಿಕ ಅಸ್ಮಿತೆಗಳನ್ನು ವಿರೂಪಗೊಳಿಸದೆ ಬರಲಿ ಎಂಬುದೇ ಎಲ್ಲರ ಒಲವು. ಇಲ್ಲವಾದರೆ ಅಭಿವೃದ್ಧಿಯೆನ್ನುವುದು 'ಮಳಲ ಪ್ರತಿಮೆಯ ಅಡಿಗೆ ನೀರುಣಿಸಿದಂತಾಗುತ್ತದೆ!' ಇಂತಹ ದುರಂತಗಳ ಬಗ್ಗೆ ಮುನ್ನೋಟವಿಲ್ಲದಿರುವುದರಿಂದಲೇ ದೇವರ ಕಣಿವೆಯನ್ನು 'ನೀರು ಬಾಯಾರಿ ಭೂಮಿಯ ಕುಡಿದಂತಾಗಿದೆ!'.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಒಳ್ಳೆಯದು ಉಳಿಯಬೇಕಾದರೆ ಕೆಟ್ಟವರೊಂದಿಗೆ ಹೋರಾಡಬೇಕು.

  –ಅನಕೃ
- ಕಿವಿಕೊಡುವ ಸದ್ಬುದ್ಧಿ ಇದ್ದರೆ ನಾವು ನಮ್ಮ ಜೀವನದಲ್ಲಿ ಎಷ್ಟೋ ಅನಾಹುತಗಳನ್ನು ತಪ್ಪಿಸಬಹುದು.

  –ಪೂರ್ಣಚಂದ್ರ ತೇಜಸ್ವಿ
- ಎಲ್ಲ ನೈತಿಕ ಮೌಲ್ಯಗಳನ್ನು ಸೇರಿಸಿ ಎರಕ ಹೊಯ್ದ ಅತ್ಯಂತ ಉದಾತ್ತ ಮೌಲ್ಯವೆಂದರೆ ಪ್ರಾಮಾಣಿಕತೆ.

  –ಅಂಬೇಡ್ಕರ್
- ತಾಳಿ ತಾಳಿ ಎನ್ನುವುದೇ ಮಂತ್ರ; ತಾಳ್ಮೆ ಇಲ್ಲದಿರೆ ಬಾಳೇ ಅತಂತ್ರ.

  – ಪು.ತಿ.ನ.
- ಪುಸ್ತಕಗಳು ಪ್ರತಿಯೊಬ್ಬರ ಮನಸ್ಸಿಗೂ ಪರಾಗವನ್ನು ಹೊತ್ತೊಯ್ಯುವ ದುಂಬಿಗಳು.

  –ಜೇಮ್ಸ್ ರಸೆಲ್
- ನನಗೆ ಗುಲಾಬಿ ಹೂವು ಎಷ್ಟು ಪ್ರಿಯವೋ, ಕಳ್ಳಿಯ ಪೊದೆ ಕೂಡ ಅಷ್ಟೇ ಪ್ರಿಯ.

  –ಕೆ.ಕೆ. ಹೆಬ್ಬಾರ
- ನೀತಿಯ ನೆಲೆಗಟ್ಟಿಲ್ಲದ ವಾದವು ಮಾತಿನ ವ್ಯಭಿಚಾರ.

  –ಎಸ್.ಎಲ್. ಭೈರಪ್ಪ